**5**

ನನ್ನ ತಲೆಯಲ್ಲಿ ನೂರಾರು ಯೋಚನೆಗಳು. ಕಾರು ಕೊಳ್ಳಬೇಕೆಂದು ಬ್ಯಾಂಕಿನಲ್ಲಿ ಸಾಲ ಮಂಜೂರಾದ ಬೆನ್ನಲ್ಲೇ ಆಫೀಸಿನಲ್ಲಿ ಈ ಬಾರಿ ಸೇಲ್ಸ್ ಚೆನ್ನಾಗಿ ಆಗಿಲ್ಲ ಎನ್ನುವ ಸುದ್ದಿ ಹೊರಬಿದ್ದಿದೆ. ಅಮೆಜಾನ್‌ನಲ್ಲಿ ಬಿಲಿಯನ್ ಡೇ ಸೇಲ್ ನಡೆಯುತ್ತಿದೆ. ಯಾವುದಾದರೂ ಐಟಂಗೆ ಒಳ್ಳೆಯ ಡಿಸ್ಕೌಂಟ್ ಇದ್ದರೆ ತಗೋಬೇಕು. ಆಫರಿಗೆ ನಾಳೆಯೇ ಕೊನೆಯದಿನ. ಮಗಳನ್ನು ಯಾವುದಾದರೂ ಫಾರಿನ್ ಲಾಂಗ್ವೇಜ್ ಕ್ಲಾಸಿಗೆ ಸೇರಿಸಬೇಕು. ಸ್ಪ್ಯಾನಿಶೇ ಒಳ್ಳೆಯದು. ಅದು ಇಂಗ್ಲಿಷನ್ನು ಮೀರಿ ಬೆಳೆಯುವ ದಿನ ದೂರವಿಲ್ಲ ಎನ್ನುತ್ತಿದ್ದ ಮೋ. ತುಸು ಹಣ ಹೊಂದಿಸಿಕೊಂಡು ಈ ಬಾರಿಯಾದರೂ ಡೈನಿಂಗ್ ಟೇಬಲ್ ಮಾಡಿಸಬೇಕು. ಮೋ ಮನೆಯ ಟೇಬಲ್ಲು ಎಷ್ಟು ಚೆನ್ನಾಗಿತ್ತು, ಅವನ ಲೆವಲ್ಲಿನದಂತೂ ಸಾಧ್ಯವೇ ಇಲ್ಲ, ಕೊನೇ ಪಕ್ಷ ಅದೇ ಕಾನ್ಸೆಪ್ಟಿನದಾದರೂ ಮಾಡಿಸಬೇಕು... ಮೋ, ಮೋ, ಮೋ. ಸತ್ತು ವರ್ಷಗಳೇ ಆಗುತ್ತ ಬಂದರೂ ಮೋ ನನ್ನನ್ನು ಆ ಪರಿಯಾಗಿ ಕಾಡುತ್ತಿದ್ದಾನೆ. ಆತ ಸತ್ತಿದ್ದಾನೋ ಇಲ್ಲವೋ ಎಂಬುದೇ ನನಗೆ ಅನುಮಾನ. ಪ್ರತೀ ಹಂತದಲ್ಲೂ ಅವನೇ ನೆನಪಾಗುತ್ತಾನೆ, ಮನಸ್ಸಿಗೆ ಹಿಂಸೆಯಾಗುತ್ತದೆ, ಅವನಿಲ್ಲದೇ ಬಾಳೇ ನೀರಸ ಅನ್ನುವಷ್ಟು! ಈತನನ್ನು ನಾನು ಈ ಮಟ್ಟಿಗೆ ಹಚ್ಚಿಕೊಂಡಿದ್ದೆನೇ? ಅವನು ಜೊತೆಯಿರುವವರೆಗೂ ನನಗೆ ಗೊತ್ತೇ ಆಗಿಲ್ಲವಲ್ಲ!

ಆದಿನ ರಾತ್ರಿ ಹೆದ್ದಾರಿಯಂತಿರುವ ನುಣುಪಾದ ರಸ್ತೆಯಲ್ಲಿ ಹೊಸದಾಗಿ ಕೊಂಡ ಕಾರಲ್ಲಿ ನಾನು ವೇಗವಾಗಿ ಹೋಗುತ್ತಿದ್ದೆ. ಬಹಳೇ ಖುಷಿಯಾಗುತ್ತಿತ್ತು, ತುಸು ದೂರ ಸಾಗಿದರೆ ಟ್ರಂಪೆಟ್ ಆಕಾರದ ಅದ್ಭುತ ಫ್ಲೈಓವರು. ಅರೇ, ಇದ್ಯಾವುದೋ ಹೊಸದಾಗಿ ಆಗಿದ್ದಿರಬೇಕು; ನನಗೆ ಗೊತ್ತೇ ಇರಲಿಲ್ಲ! ಕಾರಿನ ವೇಗ ಇನ್ನೂ ಹೆಚ್ಚಿಸಿದೆ... ನೋಡನೋಡುತ್ತಲೇ ನಡುವೆ ಕಾರಿನ ಬ್ರೇಕ್‌ಫೇಲ್ ಆಗಿಹೋಯಿತು. ಜೊತೆಗೆ ಗಾಡಿಯ ವೇಗವೂ ಹೆಚ್ಚುತ್ತಿದೆ, ಆದರೆ ನನ್ನ ಹತೋಟಿಗೆ ಸಿಗುತ್ತಿಲ್ಲ. ಶರವೇಗದಲ್ಲಿ ಸಾಗುತ್ತಿರುವ ಕಾರು ಯಾವುದೋ ಅಂಡರ್‌ಪಾಸಿನ ಕೆಳಗೆ ಓಡುತ್ತಿದೆ. ಬರೀ ಕತ್ತಲು ಅಲ್ಲಿ.ರೊಯ್ಯ ರೊಯ್ಯನೆ ಹೋಗುತ್ತಿರುವ ಕಾರು... ಎಷ್ಟು ದೂರ ಹೋದರೂ ಕತ್ತಲು. ಇದು ಅಂಡರ್‌ಪಾಸೋ ಅಥವಾ ಯಾವುದೋ ಪ್ರಪಾತವೋ?... ಹೌದು, ಪ್ರಪಾತವೇ... ಈಗ ಕಾರು ತಲೆಕೆಳಗಾಗಿ ಬೀಳುತ್ತಿದೆ... ಇನ್ನೇನು ತಳಕ್ಕೆ ಅಪ್ಪಳಿಸಿದೆ... ಅಯ್ಯೋss ನಾನು ಸತ್ತೇಹೋದೆನೇ... ಮೈಯ್ಯೆಲ್ಲ ಕಂಪಿಸಿದಂತಾಯಿತು ನನಗೆ. ಇದು ಕನಸೋ ಅಥವಾ ನಿಜವೋ ಅರಿವಿಗೆ ಬರುತ್ತಿಲ್ಲ. ವಿಚಿತ್ರವಾದ ಯಾತನೆಯಾಗುತ್ತಿದೆ. ದೇವರೇ, ಇದು ಕನಸೇ ಆಗಿರಲಿ. ಪಕ್ಕದಲ್ಲಿ ಹೆಂಡತಿ ಮಗಳು ಹಾಸಿಗೆಯಲ್ಲಿ ಮಲಗಿದ್ದಾರೆ. ಆದರೆ ಅದು ಕನಸಿನಲ್ಲೋ ಅಥವಾ ನಿಜವೋ?... ಭಯಭೀತನಾದ ನಾನು ಹೆಂಡತಿಯ ಭುಜವನ್ನು ಜೋರಾಗಿ ಅಲ್ಲಾಡಿಸಿದೆ. ಆಕೆಗೆ ಎಚ್ಚರಾಗುತ್ತಿಲ್ಲ. ಗಾಳಿಗೆ ಬಾಗಿಲು ಕಿರ್ ಎಂದರೂ, ಟಾಯ್‌ಲೆಟ್ಟಿನಲ್ಲಿ ತೊಟ್ಟಿಕ್ಕಿದರೂ ಎಚ್ಚರಗೊಂಡು ಅಸಮಾಧಾನಗೊಳ್ಳುವವಳಿಗೆ ಇದೆಂಥ ಗಾಢ ನಿದ್ರೆ ಇವತ್ತು! ಹಾಗಾದರೆ ನಾನು ಸತ್ತೇ ಹೋಗಿದ್ದೇನೆಯೇ? ಆಮೆಯ ಗೊಂಬೆಯೊಂದನ್ನು ಎದೆಗವಚಿ ಮಲಗಿದ ಮಗಳ ಗಲ್ಲ ಅಲ್ಲಾಡಿಸಿದೆ... 'ಪುಟ್ಟೀ...' ಆಕೆಗೂ ಕೇಳಿಸುತ್ತಿಲ್ಲ, ಕೋಣೆಯ ಸ್ವಿಚ್ ಹಾಕಿದರೆ ದೀಪ ಹೊತ್ತಿಕೊಳ್ಳುತ್ತಿಲ್ಲ... ಕರಂಟ್ ಹೋಗಿದೆಯೋ ಅಥವಾ... ನಾನು ಆತ್ಮವಾಗಿ ತಿರುಗಾಡುತ್ತಿದ್ದೇನೊ?... ಹುಚ್ಚು ಹಿಡಿದಂತಾಗಿ ನಾನು ಮನೆಯಿಂದ ಹೊರಗೆ ಬಂದು ರಸ್ತೆಯಲ್ಲಿ ನಿಂತು ಜೋರಾಗಿ ಅರಚಿದೆ. ಯಾರಿಗೂ ಕೇಳಿಸುತ್ತಿಲ್ಲ. ಎಲ್ಲೆಲ್ಲೂ ಸ್ಮಶಾನ ಮೌನ. ಪಕ್ಕದಲ್ಲೇ ಮಲಗಿದ ನಾಯಿ ಕೂಡ ಎದ್ದು